'ನೀನೇನೇ ಹೇಳು ಈ ಚಿಂತೆಗಳು ನಮ್ಮನ್ನ ಬಿಡೋದಿಲ್ಲ. ಆ ಹಾಡು ಶ್ರೀಗಂಧ ನಾನಾಗಿ... ಹೇಳುತ್ತೀಯಲ್ಲ ಆ ಹಾಡು ನನಗೆ ಯಾಕೆ ಇಷ್ಟ ಗೊತ್ತಾ! ಅದರಲ್ಲಿ ನಮ್ಮಂತಹ ಮಧ್ಯಮವರ್ಗದ ಜನರ ಬವಣೆಗಳಿಗೆ ಉತ್ತರ ಇದೆ ಅನ್ನಿಸುತ್ತೆ. ನಾವೆಲ್ಲ ಹಾಗೆ ಹುಟ್ಟೋ ಹಾಗಿದ್ರೆ ಎಷ್ಟು ಚೆನ್ನಾಗಿರುತ್ತೆ ಅಲ್ವಾ?' ಅಂದ.

ಅವನ ಭಾವುಕತೆಯನ್ನು ಒಗೆದು ಹಾಕುವಂತೆ ಹೇಳಿದಳು, 'ಶ್ರೀಗಂಧವಾಗಿ ಹುಟ್ಟುವುದು ಸುಲಭ ಅಂತ ಯಾರು ಹೇಳಿದ್ರು? ಅವರು ಬರೆದರು. ನಾವು ಹಾಡಿದೆವು ಅಷ್ಟೆ. ಯಾರಿಗೆ ಗೊತ್ತು. ಮನುಷ್ಯನಾಗಿ ಸವೆದಾಗ ಮಾತ್ರ ಶ್ರೀಗಂಧವಾಗಿ, ಹೂವಾಗಿ ಹುಟ್ಟಲು ಸಾಧ್ಯವಾಗಬಹುದು. ಬರೆದದ್ದು ಸುಲಭ. ಹಾಡುವುದು ಕಷ್ಟ. ಹಾಗೇ ಆಗಬೇಕು ಅಂದ್ರೆ... ಇನ್ನೂ ಎಷ್ಟು ಕಷ್ಟ ಅಲ್ವಾ?'

'ಅಲ್ವೇ... ಮನುಷ್ಯ ಜನ್ಮವೇ ದೊಡ್ಡದು ಅಂತ ಹೇಳ್ತಾರಲ್ಲ...' ಅವಳ ಸಿದ್ಧಾಂತ ಅವನಿಗೆ ತಿಳಿಯಲಿಲ್ಲ.

'ಹಾಗೆ ಹೇಳಿದ್ದು ಮನುಷ್ಯನೇ ಅಲ್ವ? ಇರಲಿ. ಅದನ್ನ ನಿಜ ಅಂತನೇ ಇಟ್ಟುಕೊಳ್ಳೋಣ. ಹಾಗಂದಮೇಲೆ ಗಂಧ ಆಗಲಿಲ್ಲ, ಹೂವಾಗಲಿಲ್ಲ, ನೀರು ಆಗಲಿಲ್ಲ... ಅಂತ ಯಾಕೆ ಅಳಬೇಕು ಹೇಳಿ? ಮನುಷ್ಯನಾಗೇ ಚೆನ್ನಾಗಿರಬೇಕು ತಾನೆ?' ಅವಳ ಪ್ರಶ್ನೆಪಾಠಕ್ಕೆ ಅವನ ಹತ್ತಿರ ಉತ್ತರ ಇಲ್ಲ.

'ಆದ್ರೂನೂ... ಮನುಷ್ಯ ಜನ್ಮಕ್ಕೆ ಇರೋ ಚಿಂತೆ ಆ ಬೇರೆ ಯಾವುದಕ್ಕೂ ಇರೋದಿಲ್ಲ ಅನ್ನೋದಂತೂ ಖಂಡಿತ ಕಣೆ' ಸುಂದರ್‌ನ ಮನಸ್ಸು ಒಂದು ತಹಬದಿಗೆ ಬರುತ್ತಿತ್ತು. ಆದರೂ ವಾದವನ್ನು ಬಿಟ್ಟುಕೊಡಲು ಇಷ್ಟ ಇರಲಿಲ್ಲ. ಸುಮ್ಮನೆ ಬೆಳೆಸುತ್ತಿದ್ದ.

ಅವಳೂ ಅದಕ್ಕೆ ಕಟ್ಟುನಿಟ್ಟಾಗಿ 'ಹೌದು ಹೌದು. ಈ ಮನುಷ್ಯ ಜನ್ಮಕ್ಕೇ ಸಂಸಾರ ಅಂತ ಬಂದಿರೋದು. ಆ ಯಾವುದಕ್ಕೂ ಅಲ್ಲವಲ್ಲ... ಏಳಿ ಮೇಲೆ ಮಕ್ಕಳು ಬರುವ ಹೊತ್ತಾಯಿತು' ಅಂದಳು.

ಅವಳ ಖಚಿತ ನುಡಿಯೋ, ಥಿಯರಿಯೋ, ತೀರ್ಮಾನವೋ ಏನೋ ಗೊತ್ತಿಲ್ಲ... ಒಟ್ಟಿನಲ್ಲಿ ಅವನಿಗೆ ಎರಡು ದಿನದ ರಜೆ ಹಾಯೆನಿಸಿತು. ಆಫೀಸಿನ ಚಿಂತೆಯೂ ಬಾಧಿಸಲಿಲ್ಲ. ಆ ಭಾನುವಾರ ಮಕ್ಕಳು ಮುಗ್ಧವಾಗಿ 'ಅಪ್ಪಾ ಕೇರಂ ಆಡೋಣ ಬಾಪ್ಪ' ಅಂದಾಗ ಅವನ ಚಿಂತೆಗಳೆಲ್ಲ ಶ್ರೀಗಂಧದಂತೆ ಸವೆದು, ಹೂವಿನಂತೆ ಪರಿಮಳ ಬೀರಿ, ನೀರಿನಂತೆ ಹರಿದುಹೋದವೇನೋ ಅನ್ನಿಸಿತು.


## ಎಂ.ಆರ್. ಮಂದಾರವಲ್ಲಿ

ಮೈಸೂರಿನಲ್ಲಿ ನೆಲೆಸಿರುವ ಮಂದಾರವಲ್ಲಿ ಶಿಕ್ಷಣಕ್ಷೇತ್ರದಲ್ಲಿ ಸಂಶೋಧಕಿ. ಮನುಷ್ಯ ಸಂಬಂಧಗಳ, ಕುಟುಂಬದೊಳಗಿನ ಸೂಕ್ಷ್ಮ ಒಳನೇಯ್ಗೆಯನ್ನು ಅವರ ಕತೆಗಳು ದಾಖಲಿಸುತ್ತವೆ. 'ಗೊಂದಲಗಳ ನಾಡಿನಲ್ಲಿ', 'ಪರಿಸರ ಎಂದರೇನು?', 'ಯಾನ ಪ್ರತಿಯಾನ' ಇವು ಅವರ ವೈಚಾರಿಕ, ಸಾಂಸ್ಕೃತಿಕ ಬರಹಗಳ ಪುಸ್ತಕಗಳು. 'ಅಳುವುದಿಲ್ಲವೇ ವಸು' ಅವರ ಕತೆಗಳ ಸಂಗ್ರಹ. 'ಅಂಧಮಕ್ಕಳ ಅರಿವಿನಂಗಣ' ಅವರ ಸಂಶೋಧನಾತ್ಮಕ ಕೃತಿ.